# ರಿಮೇಕ್ ಸುಲಭ ವ್ಯಾಪಾರ



ಭರತ್ ಬೋಪಣ್ಣ

ಉದಯ ಟಿವಿಯ 'ಮೀನಾಕ್ಷಿ ಮದುವೆ' ನಿರ್ದೇಶಕ

★ *ಹಿಂದಿಯಿಂದ ಕನ್ನಡಕ್ಕೆ ಹೊರಳಿದ್ದು ಏಕೆ?*

ಇಲ್ಲಿಗೆ ಬಂದು ವರ್ಷಗಳೇ ಕಳೆದವು. ಕನ್ನಡದಲ್ಲಿ ಇದು ನನ್ನ ಆರನೇ ಧಾರವಾಹಿ. ನಿರ್ಮಾಪಕನಾಗಿ ಇದು ಮೊದಲ ಅನುಭವ. ಮುಂಬೈಯಲ್ಲಿ ನಮ್ಮ ತಂದೆ ಹೋಟೆಲ್ ನಡೆಸುತ್ತಿದ್ದರು. ಮಂಗಳೂರಿನಲ್ಲಿ ಪ್ರೌಢಶಾಲೆ ಓದಿ ಕಂಪ್ಯೂಟರ್ ಡಿಪ್ಲೊಮಾ ಓದಲು ಮುಂಬೈಗೆ ತೆರಳಿದೆ. ಆಗ ನನಗೆ 17 ವರ್ಷ. ಶಿಕ್ಷಣವನ್ನು ಕೈ ಬಿಟ್ಟು ಹಿಂದಿ ಕಿರುತೆರೆ ಪ್ರವೇಶ ಮಾಡಿದೆ. ರಾಜೀವ್ ಮೇಹ್ತಾ ಅವರಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. ಆಮೇಲೆ ಸ್ವತಃ ನಾನೇ ನಿರ್ದೇಶಕನೂ ಆದೆ. ಒಟ್ಟು ಏಳು ಧಾರಾವಾಹಿ ಎರಡು ಸಿನಿಮಾಗಳಲ್ಲಿ ಕೆಲಸ ಮಾಡಿದೆ. ಹೀಗಿದ್ದಾಗ ಕನ್ನಡದ ಉದ್ಯಮ ಹೇಗಿದೆ ಎಂದು ನೋಡಲು ಬೆಂಗಳೂರಿಗೆ ಬಂದೆ. ಆದರೆ ಇಲ್ಲೇ ನೆಲೆಗೊಂಡೆ.

★ *ಮೀನಾಕ್ಷಿ ಮದುವೆಯ ವಿಶೇಷ ಏನು?*

ಕಥೆ ಮತ್ತು ಚಿತ್ರೀಕರಣದಲ್ಲಿ ನೈಜತೆಗೆ ಹೆಚ್ಚು ಒತ್ತುಕೊಡಲಾಗಿದೆ. ಕಥೆ– ಸಂಭಾಷಣೆಯನ್ನು ಮೂವರ ತಂಡ ಸಿದ್ಧಪಡಿಸುತ್ತದೆ. ಮತ್ತೆ ಎಲ್ಲರೂ ಚರ್ಚಿಸಿ ಅಂತಿಮಗೊಳಿಸುತ್ತೇವೆ. ಸಾಮಾನ್ಯವಾಗಿ ಧಾರಾವಾಹಿ ಮನೆಯಲ್ಲೇ ಚಿತ್ರೀಕರಣ ಹೆಚ್ಚು. ನಮ್ಮ ತಂಡ ಸಿನಿಮಾ ಮಾದರಿಯಲ್ಲಿ ಕಾಶ್ಮೀರ, ಲಡಾಕ್, ಶಿಮ್ಲಾದಲ್ಲಿ ಚಿತ್ರೀಕರಣ ಮಾಡಿತು. ಅದು ಕೂಡ ಒಂದು ಸಾಹಸಗಾಥೆ. ಭೀಕರ ಚಳಿಯಲ್ಲಿ ಸೆಟ್ ಹಾಕಿದ್ದೇ ವಿಶೇಷ.

★ *ನೀವು ಕಂಡಂತೆ ಹಿಂದಿ ಮತ್ತು ಕನ್ನಡ ಟಿವಿ ಕುರಿತು ಹೇಳುವುದಾದರೆ..*

ಹಿಂದಿಗೆ ವಿಶ್ವ ವ್ಯಾಪಿ ಮಾರುಕಟ್ಟೆ ಇದೆ. ಕನ್ನಡ ಮಾರುಕಟ್ಟೆ ಪ್ರಮಾಣ ನೋಡುವುದಾದರೆ 20ರಲ್ಲಿ ಒಂದು ಭಾಗದಷ್ಟು ಮಾತ್ರ. ಹಿಂದಿಯಲ್ಲಿ ನಿರ್ಮಾಣವೂ ಅದ್ದೂರಿಯಾಗಿರುತ್ತದೆ. ಹೂಡಿಕೆಯ ಮೊತ್ತವೂ ದೊಡ್ಡದಾಗಿರುತ್ತದೆ. ಆದರೆ, ಕನ್ನಡದ ಮಾರುಕಟ್ಟೆ ಚಿಕ್ಕದಿದೆ. ಹಣವನ್ನೂ ಲೆಕ್ಕಾಚಾರದಲ್ಲಿಯೇ ಹಾಕಬೇಕು. ಆದರೂ ಯಾವುದಕ್ಕೂ ಕಡಿಮೆ ಇಲ್ಲದಂತೆ ನಿರ್ಮಿಸುತ್ತಿರುವುದು ಹೆಮ್ಮೆಯ ವಿಷಯ. ಬಂಡವಾಳ ಕಡಿಮೆ ಹಾಕಿದರೂ ಒಳ್ಳೆಯ ಧಾರಾವಾಹಿಗಳು ಬಂದಿವೆ. ನಾನು ಆರು ತಿಂಗಳು ನೋಡೋಣ ಎಂದು ಬೆಂಗಳೂರಿಗೆ ಬಂದಿದ್ದೆ. ಆದರೆ ಕನ್ನಡ ಸರಸ್ವತಿ ನನ್ನ ಕೈ ಹಿಡಿದಿದ್ದಾಳೆ. ನಂಬಿದವರಿಗೆ ಇಲ್ಲಿ ಅನ್ನ ಇದ್ದೇ ಇದೆ. ಹಾಗಾಗಿ ಮತ್ತೆ ಬೇರೆ ಎಲ್ಲಿಯೂ ಹೋಗುವ ಬಗ್ಗೆ ಯೋಚಿಸಲಿಲ್ಲ.

★ *ಕನ್ನಡದಲ್ಲಿ ಏಕೆ ಹೆಚ್ಚಾಗಿ ಅನ್ಯ ಭಾಷೆಯ ಕಥೆಗಳನ್ನು ರಿಮೇಕ್ ಮಾಡುತ್ತಾರೆ?*

ಸ್ವಂತ ಹೊಸ ಕಥೆಗಳು ಇಲ್ಲ ಎಂದು ಈ ರೀತಿ ಮಾಡುತ್ತಾರೆ ಎಂದು ನನಗೆ ಅನ್ನಿಸಿಲ್ಲ. ಬಜೆಟ್ ಬಗ್ಗೆ ಯೋಚಿಸುವಾಗ ಸಿದ್ಧ ಸೂತ್ರಗಳನ್ನು ಅನುಸರಿಸುವುದು ಸುಲಭ ಆಗುತ್ತದೆ. ರಿಮೇಕ್ ಮಾಡುವುದರಿಂದ ಕಥೆಯ ವಿಸ್ತಾರ ಸುಲಭಕ್ಕೆ ಸಿಗುತ್ತದೆ. ಅಲ್ಲಿನ ದೋಷಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ಇರುತ್ತದೆ. ಇದರ ಜೊತೆಗೆ ವ್ಯಾಪಾರಿ ಸಂಬಂಧಿ ಅನೇಕ ಲಾಭಗಳು ಇರುತ್ತವೆ. ಸ್ವಮೇಕ್ ಮಾಡಿ ಮೈಮೇಲೆ ಎಳೆದುಕೊಳ್ಳುವುದಕ್ಕಿಂತ ಯಶಸ್ವಿ ಕಥೆಗೆ ಕನ್ನಡ ರೂಪ ಕೊಡುವ ಮಾದರಿ ಇಷ್ಟವಾಗುವುದು ಹಣದ ಕಾರಣಕ್ಕೆ ಎಂದೆನಿಸುತ್ತದೆ.

■ ರಾಗು




ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ

"ಶ್ರೀ ಮಂಜುನಾಥ ಗುರೂಜಿ"

ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಬಾಧೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ

9886999747